# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಶುಕ್ರವಾರ, ೦೯, ಜನವರಿ, ೨೦೨೬(ಪುಷ್ಯ, ೧೯, ಶಕವರ್ಷ, ೧೯೪೭)<br>BENGALURU, FRIDAY, 09, JANUARY, 2026(PUSHYA , 19, SHAKAVARSHA, 1947) | ನಂ. ೫೬<br>No.56 |
|---|---|---|

**ಕರ್ನಾಟಕ ಸರ್ಕಾರ**

**ಕಡತ ಸಂಖ್ಯೆ: ನಅಇ 288 ಎಂಎಲ್ಆರ್ 2025(e)**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ:08/01/2026.**

**ಅಧಿಸೂಚನೆ**

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಸೆಕ್ಷನ್–3, 4, 9, 349, 351 ಮತ್ತು 355 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಘನತೆವೆತ್ತ ಕರ್ನಾಟಕ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ ಅಂದರೆ:

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕು ನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಶೆಡ್ಯೂಲ್–ಬಿ ರಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಉತ್ತರ ಕನ್ನಡ ಜಿಲ್ಲೆಯ ಮಾವಳ್ಳಿ–1 ಮತ್ತು ಮಾವಳ್ಳಿ–2 ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಅನುಬಂಧ–ಎ ರಲ್ಲಿ ಒಳಗೊಂಡ ಪ್ರದೇಶಗಳನ್ನೊಳಗೊಂಡಂತೆ ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ "ಪರಿವರ್ತಿತ ಪ್ರದೇಶ" ಎಂದು ಉದ್ಘೋಷಿಸಿ, ಸದರಿ ಪರಿವರ್ತಿತ ಪ್ರದೇಶವನ್ನು "ಮುರುಡೇಶ್ವರ ಪಟ್ಟಣ ಪಂಚಾಯಿತಿ" ಪ್ರದೇಶವೆಂದು ಪದನಾಮೀಕರಿಸಲು ಹಾಗೂ ಸದರಿ ಪರಿವರ್ತಿತ ಪ್ರದೇಶಕ್ಕೆ "ಪಟ್ಟಣ ಪಂಚಾಯಿತಿ"ಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಈ ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಈ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು/ಸಲಹೆಗಳನ್ನು ಸಲ್ಲಿಸಲು ಇಚ್ಛಿಸುವ ಎಲ್ಲಾ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣ ಸಹಿತವಾಗಿ ಸದರಿ ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು. ಇವರಿಗೆ ಸಲ್ಲಿಸಬೇಕೆಂದು ಹಾಗೂ ಅಧಿಸೂಚನೆಯನ್ನು ಸದರಿ ಅವಧಿಯ ತರುವಾಯ ನಿಗದಿತ ಸಮಯದಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

**ಸಂಖ್ಯೆ:ನಅಇ 288 ಎಂಎಲ್ಆರ್ 2025(e).**

**ಶೆಡ್ಯೂಲ್–ಎ**

| **ಜಿಲ್ಲೆ** | **ಪರಿಗಣಿಸಲಾಗುವ ಸ್ಥಳೀಯ ಸಂಸ್ಥೆ** | **ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಪ್ರದೇಶಗಳ ವಿವರ** | **ಒಟ್ಟು ಪ್ರದೇಶ** |
|---|---|---|---|
| ಉತ್ತರ ಕನ್ನಡ | ಮಾವಳ್ಳಿ–1 & ಮಾವಳ್ಳಿ–2 ಗ್ರಾಮ ಪಂಚಾಯಿತಿ | ಹಾಲಿ ಮಾವಳ್ಳಿ–1 & ಮಾವಳ್ಳಿ–2 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳು | 14.85 ಚದರ ಕಿಲೋ ಮೀಟರ್ ಗಳು |

**ಷೆಡ್ಯೂಲ್–ಬಿ**

**ಪೂರ್ವಕ್ಕೆ:** ಕೊಪ್ಪ ಗ್ರಾಮ ಪಂಚಾಯಿತಿ ಗಡಿ.

**ಪಶ್ಚಿಮಕ್ಕೆ:** ಅರಬ್ಬೀ ಸಮುದ್ರ.

**ಉತ್ತರಕ್ಕೆ:** ಬೈಲೂರು ಗ್ರಾಮ ಪಂಚಾಯಿತಿ ಗಡಿ.

**ದಕ್ಷಿಣಕ್ಕೆ:** ಕಾಯ್ಕಿಣಿ ಗ್ರಾಮ ಪಂಚಾಯಿತಿ ಗಡಿ.

# GOVERNMENT OF KARNATAKA

**No.UDD 288 MLR 2025(e).**

Karanataka Government Secretariat,
Vikasa Soudha,
Bengaluru, **dated:08/01/2026.**

## NOTIFICATION

In exercise of the powers conferred by the Section 3 read with section-4, 9, 349, 351 and 355 of the Karnataka Municipalities Act 1964, His Excellency, the Governor of Karnataka hereby propose to declare Grama Panchayats' area of Maavalli-1 and Maavalli-2 of Uttara Kannada District with the areas mentioned in Schedule "A" along with the boundaries mentioned in Schedule "B" as the "Transitional Area" and further to specify it as "Town Panchayat of Murudeshwara" and to constitute the 'Town Panchayat' with effect from the date of publishing this Notification in the Official Gazette having regard to:

i. The population of such area is not less than ten thousand and not more than Twenty thousand;
ii. The density of population in such area is not less than four hundred inhabitants to one square kilometer of area;
iii. The percentage of employment in non-agricultural activities is not less than fifty per cent of the total employment.

The notification is hereby published for the information of the Public. All the persons, who would like to file any objection/suggestion to this Notification are hereby required to submit the same with reasons in writing to the Director, Directorate of Municipal Administration, 9th Floor, V.V.Tower, Bengaluru within 30 days from publication of this Notification in the Official Gazette. Further, Notification will be taken up for final consideration after the mentioned period of 30 days.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**No.UDD 288 MLR 2025(e)**

## Schedule-A

| District | Grama Panchayat being considered | Areas to be included | Total Area |
|---|---|---|---|
| Uttara Kannada | Grama Panchayats of Maavalli-1 & Maavalli-2 | Present Areas of Grama Panchayats of Maavalli-1 & Maavalli-2 | 14.85 Square Kilo Meters |

## Schedule-B

**East:** Boundaries of Koppa Grama Panchayat.

**West:** Arabian Sea.

**North:** Boundaries of Bailuru Grama Panchayat.

**South:** Boundaries of Kaykini Grama Panchayat.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH